# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

## ಸಿ ಸಿ ನಂಃ1129/2017

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ ಸ್ವಾಮಿಗೌಡ | | ದಿನಾಂಕ | ಃ | 20/11/2019 |
| ತಂದೆಯ ಹೆಸರು | ಃ ಕುಳ್ಳೇಗೌಡ | | ಸಿ ಡಬ್ಲ್ಯೂ | ಃ | 05 |
| ವಯಸ್ಸು | ಃ 65 ವರ್ಷ | | ಪಿ ಡಬ್ಲ್ಯೂ | ಃ | 04 |
| ಉದ್ಯೋಗ | ಃ ವ್ಯವಸಾಯ | | | | |
| ವಿಳಾಸ | ಃ ಹುಲ್ಲಂಗಾಲಕೊಪ್ಪಲು ಗ್ರಾಮ | | | | |

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಆರೋಪಿ ಗೊತ್ತು. ಆರೋಪಿಯನ್ನು ನೋಡಿರುತ್ತೇನೆ. ಚಾಸಾ-1 ರಿಂದ 4, 6 ರಿಂದ 11 ಗೊತ್ತಿಲ್ಲ. ಮೃತ ಸರಸಮಣಿ ಮತ್ತು ಸುನಂದ ಗೊತ್ತಿಲ್ಲ. ಹೊಡಿಕೆಕಟ್ಟೆಯಿಂದ ಅರಕಲಗೂಡಿಗೆ ಈಗ್ಗೆ 3-4 ವರ್ಷದ ಹಿಂದೆ ಮಧ್ಯಾಹ್ನ 3-00 ಗಂಟೆ ಸುಮಾರಿಗೆ ಟ್ಯಾಕ್ಸಿಯಲ್ಲಿ ಬರುತ್ತಿದ್ದೆ. ಪ್ರಯಾಣಿಕರು ಸುಮಾರು ಜನರು ಇದ್ದರು. ಹೊನ್ನವಳ್ಳಿಯ ಹತ್ತಿರ ಬರುತ್ತಿದ್ದಾಗ ಸದರಿ ವಾಹನ ಕಲ್ಲಿಗೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತ ಆಯಿತು. ನನ್ನ ತಲೆಗೆ, ಬಲಭುಜಕ್ಕೆ ಪೆಟ್ಟಾಯಿತು. ಎಷ್ಟು ಜನಕ್ಕೆ ಪೆಟ್ಟಾಯಿತು ಎಂದು ನನಗೆ ಗೊತ್ತಿಲ್ಲ. ನನಗೆ ಪ್ರಜ್ಞೆ ಇರಲಿಲ್ಲ. ಅರಕಲಗೂಡು ಆಸ್ಪತ್ರೆ ನಂತರ ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ವಾಹನವನ್ನು ಯಾರು ಚಲಾಯಿಸುತ್ತಿದ್ದರು, ಅದರ ನಂಬರ್ ಗೊತ್ತಿಲ್ಲ. ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ಗೊತ್ತಿಲ್ಲ. ಆರೋಪಿಯನ್ನು ಆ ದಿನ ನೋಡಿಲ್ಲ. ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ಹೇಳಿಲ್ಲ. ನಿಪಿ-2 ರ ಫೋಟೋದಲ್ಲಿರುವ ವಾಹನವನ್ನು ಗುರ್ತಿಸಲು ಆಗುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಸಸಅರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು )

ಪಾಟೀ ಸವಾಲು ಃ ಸಸಅರವರಿಂದ,

ದಿಃ**07/05/2017** ರಂದು ಮಧ್ಯಾಹ್ನ **3-20** ಗಂಟೆ ಸಮಯದಲ್ಲಿ ಕೆಎ-**13**-ಎ-**2625** ರ ಟ್ರ್ಯಾಕ್ಟ್ ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಸುಮಾರು **3-45** ಗಂಟೆ ಸಮಯದಲ್ಲಿ ಆರೋಪಿ ಚಾಲಕನಿದ್ದು, ಆರೋಪಿಗೆ ವೇಗವಾಗಿ ಹೋಗಬೇಕು, ನಿಧಾನವಾಗಿ ಹೋಗು ಎಂದು ಹೇಳುತ್ತಿದ್ದೆವು, ಆದರೂ ಸಹ ಆರೋಪಿ ವೇಗವಾಗಿ ವಾಹನ ಚಲಾಯಿಸಿ ರಸ್ತೆ ಬದಿಯಲ್ಲಿ ಕಲ್ಲುಗಳಿಗೆ ಡಿಕ್ಕಿ ಪಡಿಸಿದಾಗ ವಾಹನ ಅಪಘಾತ ಆಗಿ ಕೆಳಕ್ಕೆ ಬಿತ್ತು, ಆಗ ನನ್ನ ಕಾಲಿಗೂ ಸಹ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಸರಸಮ್ಮ ಎಂಬುವವರು ತೀವ್ರ ಗಾಯವಾಗಿ ಅರಕಲಗೂಡು ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಇತರೆ **10** ಜನರಿಗೂ ಪೆಟ್ಟಾಯಿತು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ವಿವರವಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಗುರ್ತಿಸಲು ನಿರಾಕರಿಸಿದ ಹೇಳಿಕೆಯನ್ನು ನಿಪಿ-**3** ಗುರ್ತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿ ಪರ ಪಾಟೀ ಸವಾಲುಃ- ಶ್ರೀ.ಎಂ.ಕೆ.ಡಿ.ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು